**ಓ.ಎಸ್.ನಂಃ 128/2023**

**ಪಿಡಬ್ಲ್ಯೂ-1**

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 17.11.2025 ರಂದು ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದಃ**

ನನ್ನ ತಂದೆಗೆ ಒಟ್ಟು 5 ಜನ ಗಂಡು ಮಕ್ಕಳು ಮಕ್ಕಳು. ಅವರ ಹೆಸರು ಸಿದ್ದಪ್ಪ, ನಾಗರಾಜಪ್ಪ @ ರಾಜಪ್ಪ, ಚೆನ್ನಪ್ಪ, ಶ್ರೀರಂಠಮೂರ್ತಿ ಮತ್ತು ನಾನು. ಎರಡು ಜನ ಹೆಣ್ಣು ಮಕ್ಕಳು ಅವರ ಹೆಸರು ನಿಂಗಮಣಮ್ಮ ಮತ್ತು ಮಹದೇವಮ್ಮ. ನಿಂಗಮಣಮ್ಮ ಮತ್ತು ಮಹದೇಮ್ಮ ಓ.ಎಸ್.ಸಂಖ್ಯೆಃ 12/2023 ದಾವೆಯನ್ನು ಹಿರಿಯ ಸಿವಿಲ್ ನ್ಯಾಯಾಲಯ, ಗುಂಡ್ಲುಪೇಟೆಯಲ್ಲಿ ದಾಖಲಿಸಿದ್ದಾರೆ ಎಂದರೆ ಸರಿ. ಸದರಿ ದಾವೆ ಚಾಲ್ತಿಯಲ್ಲಿದೆ. ಈ ದಾವ ಸ್ವತ್ತಿನ ಆಸ್ತಿಗಳನ್ನು ಓ.ಎಸ್.ಸಂಖ್ಯೆಃ 12/2023 ರಲ್ಲಿ ಸೇರಿಸಲಾಗಿದೆ ಎಂದರೆ ಸರಿ. ದಾವ ಸ್ವತ್ತನ್ನು ನಾಗರಾಜು @ ರಾಜಪ್ಪ ನನಗೆ ಬರೆದುಕೊಟ್ಟಿದ್ದಾರೆ. ದಾವ ಸ್ವತ್ತು ಅವರಿಗೆ ವಿಭಾಗದಲ್ಲಿ ಬಂದಿತ್ತು. ಅದನ್ನು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ಸದರಿ ವಿಭಾಗ ಪತ್ರವನ್ನು ಹಾಜರುಪಡಿಸಬಲ್ಲೆ. ನನ್ನ ಅಣ್ಣ-ತಮ್ಮ ಮತ್ತು ಸಹೋದರಿಯರ ನಡುವೆ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ.

ವಿಭಾಗದ ಸಲುವಾಗಿ ನ್ಯಾಯಾಲಯದಲ್ಲಿ ಇನ್ನೂ ತೀರ್ಪು ಆಗಿಲ್ಲ ಎಂದರೆ ಸರಿ. ನಮ್ಮ ಕುಟುಂಬದ ನಡುವೆ ವಿಭಾಗ ಆಗದೆ ಇರುವ ಕಾರಣ ನಾನು ದಾವ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ